Akashvani : Bangalore
National Bulletin In Kannada
20.03.2024 / 7.35 am
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

**<><*<><>*><>**

ಮುಖ್ಯಾಂಶಗಳು

೧. ಲೋಕಸಭಾ ಚುನಾವಣೆಯ ಮೊದಲ ಹಂತಕ್ಕೆ ಇಂದು ಅಧಿಸೂಚನೆ ಪ್ರಕಟ

೨. ಸ್ಟಾರ್ಟ್‌ಅಪ್ ಮಹಾಕುಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಇಂದು ಭಾಗಿ

೩. ಸಾರ್ವತ್ರಿಕ ಚುನಾವಣೆ ಹಿನ್ನೆಲೆ; ಕೇಂದ್ರ ಲೋಕಸೇವಾ ಆಯೋಗ- ಯುಪಿಎಸ್‌ಸಿ ಪೂರ್ವಭಾವಿ ಪರೀಕ್ಷೆ ಮುಂದೂಡಿಕೆ

೪. ಸ್ವಿಸ್ ಓಪನ್ ಬ್ಯಾಡ್ಮಿಂಟನ್; ಗಾಯತ್ರಿ ಗೋಪಿಚಂದ್ - ಟ್ರೀಸಾ ಜಾಲಿ ಡಬಲ್ಸ್ ವಿಭಾಗದ ಪ್ರೀ ಕ್ವಾರ್ಟರ್‌ಗೆ ಪ್ರವೇಶ

**<><*<><>*><>**

೨೦೨೪ರ ಸಾರ್ವತ್ರಿಕ ಲೋಕಸಭಾ ಚುನಾವಣೆಯ ಮೊದಲ ಹಂತಕ್ಕೆ ಇಂದು ಅಧಿಸೂಚನೆ ಪ್ರಕಟವಾಗಲಿದೆ. ಮೊದಲ ಹಂತದಲ್ಲಿ ೧೭ ರಾಜ್ಯಗಳು ಮತ್ತು ೪ ಕೇಂದ್ರಾಡಳಿತ ಪ್ರದೇಶಗಳಲ್ಲಿನ ೧೦೨ ಲೋಕಸಭಾ ಕ್ಷೇತ್ರಗಳಿಗೆ ಮತದಾನ ನಡೆಯಲಿದೆ. ಅದರಂತೆ, ಇದೇ ೧೯ರಂದು ನಡೆಯಲಿರುವ ಮೊದಲ ಹಂತದಲ್ಲಿ ತಮಿಳುನಾಡಿನ ೩೯ಸ್ಥಾನಗಳು, ರಾಜಸ್ಥಾನದ ೧೨, ಉತ್ತರ ಪ್ರದೇಶದ ೮, ಮಧ್ಯ ಪ್ರದೇಶದ ೬, ಉತ್ತರಾಖಂಡ, ಅಸ್ಸಾಂ ಮತ್ತು ಮಹಾರಾಷ್ಟ್ರದ ತಲಾ ೫, ಬಿಹಾರದ ೪, ಪಶ್ಚಿಮ ಬಂಗಾಳದ ೩, ಅರುಣಾಚಲ ಪ್ರದೇಶ, ಮಣಿಪುರ, ಮೇಘಾಲಯದ ತಲಾ ೨ ಹಾಗೂ ಛತ್ತೀಸ್‌ಗಢ, ಮಿಜೋರಾಂ, ನಾಗಾಲ್ಯಾಂಡ್, ಸಿಕ್ಕಿಂ, ತ್ರಿಪುರಾ, ಅಂಡಮಾನ್ ಮತ್ತು ನಿಕೋಬಾರ್, ಜಮ್ಮು-ಕಾಶ್ಮೀರ, ಲಕ್ಷದ್ವೀಪ ಮತ್ತು ಪುದುಚೇರಿಯ ತಲಾ ಒಂದು ಸ್ಥಾನಗಳಿಗೆ ಮತದಾನ ನಡೆಯಲಿದೆ. ನಾಮಪತ್ರ ಸಲ್ಲಿಕೆಗೆ ಈ ತಿಂಗಳ ೨೭ ಕಡೆಯ ದಿನ.

**<><*<><>*><>**

ಲೋಕಸಭಾ ಚುನಾವಣೆ ಹಿನ್ನೆಲೆ ಅಂಚೆ ಮತಪತ್ರದ ಮೂಲಕ ಮತ ಚಲಾಯಿಸಲು ಚುನಾವಣಾ ಆಯೋಗ ನಿನ್ನೆ ಮಾಧ್ಯಮ ಸಿಬ್ಬಂದಿಗೆ ಅನುಮತಿ ನೀಡಿದೆ. ನಿನ್ನೆ ಆಯೋಗ ಈ ಕುರಿತು ಅಧಿಸೂಚನೆ ಪ್ರಕಟಿಸಿದೆ. ಈ ಹಿಂದಿನಿಂದಲೂ ಅಗತ್ಯ ಸೇವೆಗಳನ್ನು ನಿರ್ವಹಿಸುತ್ತಿರುವ ವ್ಯಕ್ತಿಗಳಿಗೆ ಅಂಚೆ ಮತಪತ್ರದ ಮೂಲಕ ತಮ್ಮ ಮತ ಚಲಾಯಿಸುವ ಅವಕಾಶ ನೀಡಲಾಗಿತ್ತು.

ಈಗ ಮಾಧ್ಯಮದವರೂ ಇದರ ಪ್ರಯೋಜನ ಪಡೆಯಬಹುದು. ಈ ಉದ್ದೇಶಕ್ಕಾಗಿ ನೋಡಲ್ ಅಧಿಕಾರಿಯನ್ನು ನೇಮಿಸಲು ಆಯೋಗ ನಿಬಂಧನೆ ಹೊರಡಿಸಿದೆ.

**<><*<><>*><>**

ಲೋಕಸಭೆ ಮತ್ತು ನಾಲ್ಕು ರಾಜ್ಯಗಳ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಕೇಂದ್ರ ಚುನಾವಣಾ ಆಯೋಗ ಚುನಾವಣಾ ಪ್ರಕ್ರಿಯೆಯಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದಿದೆ. ಕ್ರಿಮಿನಲ್ ಹಿನ್ನೆಲೆಯ ಅಭ್ಯರ್ಥಿಗಳು ಮತ್ತು ರಾಜಕೀಯ ಪಕ್ಷಗಳು ತಮ್ಮ ವೆಬ್ ಸೈಟ್‌ಗಳಲ್ಲಿ ಅಪರಾಧ ಹಿನ್ನೆಲೆ ಕುರಿತು ಮಾಹಿತಿ ಬಹಿರಂಗಪಡಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಉಮೇದುವಾರರು ಆನ್ ಲೈನ್ ಮಾದರಿಯಡಿ ನಾಮಪತ್ರ ಸಲ್ಲಿಸಲು ಹೆಚ್ಚುವರಿ ಆಯ್ಕೆಯನ್ನು ಈ ಬಾರಿ ಒದಗಿಸಲಾಗಿದೆ. ಇದಕ್ಕಾಗಿ ಮುಖ್ಯ ಚುನಾವಣಾಧಿಕಾರಿಗಳು ಮತ್ತು ಜಿಲ್ಲಾ ಚುನಾವಣಾಧಿಕಾರಿಗಳ ವೆಬ್ ಸೈಟ್ ಗಳಲ್ಲಿ ಆನ್ ಲೈನ್ ಮೂಲಕ ಸಲ್ಲಿಸುವ ನಾಮಪತ್ರದ ಅರ್ಜಿಗಳನ್ನು ಒದಗಿಸಿದೆ. ಯಾವುದೇ ಅಭ್ಯರ್ಥಿಯು ಅರ್ಜಿಯನ್ನು ಆನ್‌ಲೈನ್‌ನಲ್ಲಿ ಭರ್ತಿ ಮಾಡಬಹುದು ಮತ್ತು ಅದರ ಪ್ರಿಂಟ್ ತೆಗೆದು ಸಹಿ ಮಾಡಿದ ನಂತರ ಚುನಾವಣಾಧಿಕಾರಿಗಳ ಮುಂದೆ ಸಲ್ಲಿಸಬಹುದಾಗಿದೆ. ನಾಮಪತ್ರ ಸಲ್ಲಿಸುವವರು ಆನ್ ಲೈನ್ ಮೂಲಕ ಸೂಕ್ತ ವೇದಿಕೆಗಳಲ್ಲಿ ಠೇವಣಿ ಮೊತ್ತವನ್ನು ಪಾವತಿ ಮಾಡಬಹುದಾಗಿದೆ. ನಾಮಪತ್ರ ಸಲ್ಲಿಸುವಾಗ ಉಂಟಾಗುವ ಗಡಿಬಿಡಿ ವಾತಾವರಣ ತಪ್ಪಿಸಲು ನಾಮಪತ್ರ ಸಲ್ಲಿಕೆ, ಪರಿಶೀಲನೆ ಮತ್ತು ಚಿಹ್ನೆ ಹಂಚಿಕೆಗಾಗಿ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ಸೂಕ್ತ ಸ್ಥಳಾವಕಾಶ ಕಲ್ಪಿಸಬೇಕು. ಅಭ್ಯರ್ಥಿಗಳು ಮುಂಚಿತವಾಗಿ ಸೂಕ್ತವಾದ ಸಮಯವನ್ನು ನಿಗದಿಪಡಿಸಿಕೊಳ್ಳಬೇಕು ಎಂದು ಆಯೋಗ ಹೇಳಿದೆ.

**<><*<><>*><>**

ಪ್ರಧಾನಿ ನರೇಂದ್ರ ಮೋದಿ ಅವರು ಇಂದು ದೆಹಲಿಯ ಭಾರತ ಮಂಟಪಂನಲ್ಲಿ ಸ್ಟಾರ್ಟ್‌ಅಪ್ ಮಹಾಕುಂಭವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಇದು ಸ್ಟಾರ್ಟ್‌ಅಪ್‌ಗಳು, ನವೋದ್ಯಮಿಗಳು ಮತ್ತು ಮುಂಬರುವ ಉದ್ಯಮಿಗಳ ಪ್ರಪಂಚದ ಮಧ್ಯಸ್ಥಗಾರರನ್ನು ಒಟ್ಟುಗೂಡಿಸುವ ವೇದಿಕೆಯಾಗಿದೆ. ಕಳೆದ ಕೆಲವು ವರ್ಷಗಳಲ್ಲಿ ಸ್ಟಾರ್ಟ್‌ಅಪ್‌ಗಳ ಜಗತ್ತಿನಲ್ಲಿ ಭಾರತ ದಾಪುಗಾಲು ಇಡುತ್ತಿದೆ ಎಂದು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಪ್ರಧಾನಿ ಹೇಳಿದ್ದಾರೆ. ಕಳೆದ ಸೋಮವಾರ ಆರಂಭವಾದ ಮೂರು ದಿನಗಳ ಕಾರ್ಯಕ್ರಮದಲ್ಲಿ ಕೃತಕಬುದ್ಧಿಮತ್ತೆ, ಬಿ೨ಬಿ, ಅಗ್ರಿಟೆಕ್, ಡೀಪ್‌ಟೆಕ್, ಕ್ಲೈಮೇಟ್ ಟೆಕ್, ಗೇಮಿಂಗ್, ಎಸ್‌ಪೋರ್ಟ್ಸ್, ಫಿನ್‌ಟೆಕ್, ಇನ್‌ಕ್ಯುಬೇಟರ್‌ಗಳು ಮತ್ತು ವೇಗವರ್ಧಕಗಳು ಸೇರಿದಂತೆ ವಲಯ-ಕೇಂದ್ರಿತ ಮಂಟಪಗಳಿವೆ. ಈ ಕಾರ್ಯಕ್ರಮ, ಆವಿಷ್ಕಾರಕರ ಸ್ಟಾರ್ಟ್‌ಅಪ್‌ಗಳೊಂದಿಗೆ, ಹೂಡಿಕೆದಾರರು ಮತ್ತು ಸಂಭಾವ್ಯ ಕಾರ್ಪೊರೇಟ್ ಪಾಲುದಾರರನ್ನು ಸಂಪರ್ಕಿಸುವ ಗುರಿ ಹೊಂದಿದೆ.

**<><*<><>*><>**

ಪ್ರಧಾನಿ ನರೇಂದ್ರ ಮೋದಿ ನಾಳೆಯಿಂದ ಎರಡು ದಿನಗಳ ಭೂತಾನ್‌ಗೆ ಭೇಟಿ ನೀಡಲಿದ್ದಾರೆ. ಈ ಪ್ರವಾಸದ ಸಮಯದಲ್ಲಿ, ಪ್ರಧಾನಮಂತ್ರಿ ಅವರು ಭೂತಾನ್ ರಾಜ ಜಿಗ್ಮೆ ಖೇಸರ್ ನಮ್ಗ್ಯೆಲ್ ವಾಂಗ್‌ಚುಕ್ ಮತ್ತು ಭೂತಾನ್‌ನ ನಾಲ್ಕನೇ ರಾಜ ಜಿಗ್ಮೆ ಸಿಂಗ್ಯೆ ವಾಂಗ್‌ಚುಕ್ ಅವರನ್ನು ಭೇಟಿಯಾಗಲಿದ್ದಾರೆ.

ಬಳಿಕ ಭೂತಾನ್ ಪ್ರಧಾನಿ ತ್ಶೆರಿಂಗ್ ಟೊಬ್ಗೇ ಅವರೊಂದಿಗೆ ನರೇಂದ್ರ ಮೋದಿ ಮಾತುಕತೆ ನಡೆಸಲಿದ್ದಾರೆ. ಈ ಭೇಟಿಯು ಕೇಂದ್ರದ ಭಾರತ ಮತ್ತು ಭೂತಾನ್ ನಡುವಿನ ಸಂಪ್ರದಾಯ ವಿನಿಮಯ ಮತ್ತು ನೆರೆ ದೇಶ ಮೊದಲು ನೀತಿಗೆ ಪೂರಕವಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿದೆ. ಭಾರತ ಮತ್ತು ಭೂತಾನ್ ಪರಸ್ಪರ ನಂಬಿಕೆ, ತಿಳಿವಳಿಕೆ ಮತ್ತು ಸದ್ಭಾವನೆಯಲ್ಲಿ ಬೇರೂರಿರುವ ಅನನ್ಯ ಮತ್ತು ನಿರಂತರ ಪಾಲುದಾರಿಕೆಯನ್ನು ಹಂಚಿಕೊಳ್ಳುತ್ತವೆ. ಜತೆಗೆ ಉಭಯ ದೇಶಗಳು ಆಧ್ಯಾತ್ಮಿಕ ಪರಂಪರೆ ಮತ್ತು ಅಸಾಧಾರಣ ಬಾಂಧವ್ಯಗಳು ಹಂಚಿಕೊಳ್ಳುತ್ತವೆ ಎಂದು ಸಚಿವಾಲಯ ಹೇಳಿದೆ. ಈ ಭೇಟಿಯು ದ್ವಿಪಕ್ಷೀಯ ಮತ್ತು ಪ್ರಾದೇಶಿಕ ಆಸಕ್ತಿಯ ವಿಷಯಗಳ ಬಗ್ಗೆ ಅಭಿಪ್ರಾಯಗಳ ವಿನಿಮಯ ಮಾಡಿಕೊಳ್ಳಲು ಮತ್ತು ಎರಡೂ ದೇಶಗಳ ಜನರ ಅನುಕೂಲಕ್ಕಾಗಿ ಅನುಕರಣೀಯ ಪಾಲುದಾರಿಕೆ ವಿಸ್ತರಿಸುವ ಮಾರ್ಗಗಳ ಕುರಿತು ಉದ್ದೇಶಪೂರ್ವಕವಾಗಿ ಎರಡೂ ಕಡೆಯವರಿಗೆ ಅವಕಾಶವನ್ನು ಒದಗಿಸುತ್ತದೆ ಎಂದು ಸಚಿವಾಲಯ ಹೇಳಿದೆ.

<><*<><>*><>

ಮುಂಬರುವ ಸಾರ್ವತ್ರಿಕ ಚುನಾವಣೆ ಹಿನ್ನೆಲೆ ಕೇಂದ್ರ ಲೋಕಸೇವಾ ಆಯೋಗ - ಯುಪಿಎಸ್‌ಸಿ ೨೦೨೪ರ ನಾಗರಿಕ ಸೇವಾ ಪೂರ್ವಭಾವಿ ಪರೀಕ್ಷೆಯನ್ನು ಮುಂದೂಡಲು ನಿರ್ಧರಿಸಿದೆ. ೨೦೨೪ ರ ಭಾರತೀಯ ಅರಣ್ಯ ಸೇವಾ ಪರೀಕ್ಷೆಯ ಸ್ಕ್ರೀನಿಂಗ್ ಪರೀಕ್ಷೆಯಾಗಿ ಕಾರ್ಯನಿರ್ವಹಿಸುವ ನಾಗರಿಕ ಸೇವೆಗಳ (ಪೂರ್ವಭಾವಿ) ಪರೀಕ್ಷೆ ೨೦೨೪ ಈಗ ಈ ವರ್ಷ ಜೂನ್ ೧೬ ರಂದು ನಡೆಯಲಿದೆ. ಈ ಹಿಂದೆ ಈ ವರ್ಷದ ಮೇ ೨೬ ರಂದು ಪರೀಕ್ಷೆ ನಡೆಸಲು ನಿರ್ಧರಿಸಲಾಗಿತ್ತು.

<><*<><>*><>

ಕಾಯ್ದೆಗೆ ಸಂಬಂಧಿಸಿದಂತೆ ಕಳೆದ ವಾರ ಹೊರಡಿಸಲಾಗಿರುವ ನಿಯಮಾಳಿ ಪ್ರಶ್ನಿಸಿ ಸಲ್ಲಿಸಲಾಗಿರುವ, ೨೩೭ ಅರ್ಜಿಗಳಿಗೆ ಸಂಬಂಧಿಸಿದಂತೆ ಪ್ರತಿಕ್ರಿಯೆ ಸಲ್ಲಿಸಲು ಸರ್ವೋಚ್ಛ ನ್ಯಾಯಾಲಯ, ಕೇಂದ್ರ ಸರ್ಕಾರಕ್ಕೆ ಮೂರು ವಾರಗಳ ಸಮಯ ನಿಗದಿಪಡಿಸಿದೆ. ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿ, ಜೆ.ಬಿ.ಪರ್ದಿವಾಲ ಹಾಗೂ ನ್ಯಾಯಮೂರ್ತಿ ಮನೋಜ್ ಮಿಶ್ರಾ ಅವರನ್ನೊಳಗೊಂಡ ಪೀಠ ಅರ್ಜಿಗಳ ವಿಚಾರಣೆ ನಡೆಸಿತು. ಇಂಡಿಯನ್ ಯೂನಿಯನ್ ಮುಸ್ಲೀಂ ಲೀಗ್, ಪ್ರತಿಪಕ್ಷ ಕಾಂಗ್ರೆಸ್‌ನ ಜೈರಾಮ್ ರಮೇಶ್, ತೃಣಮೂಲ ಕಾಂಗ್ರೆಸ್‌ನ ಮಹುವಾ ಮೊಹಿತ್ರಾ ಅರ್ಜಿದಾರರಲ್ಲಿ ಸೇರಿದ್ದಾರೆ. ಪ್ರಕರಣದ ಮುಂದಿನ ವಿಚಾರಣೆಯನ್ನು ಸುಪ್ರೀಂಕೋರ್ಟ್, ಎಪ್ರಿಲ್ ೯ಕ್ಕೆ ನಿಗದಿಪಡಿಸಿದೆ.

<><*<><>*><>

ಭಾರತೀಯ ರಿಸರ್ವ್ ಬ್ಯಾಂಕ್ ವಿವಿಧ ನಿಯಮಗಳನ್ನು ಪಾಲಿಸದಿದ್ದಕ್ಕಾಗಿ ಎರಡು ಬ್ಯಾಂಕ್‌ಗಳಿಗೆ ವಿತ್ತೀಯ ದಂಡವನ್ನು ವಿಧಿಸಿದೆ. ಮೊದಲ ಪ್ರಕರಣದಲ್ಲಿ, 'ಮುಂಗಡಗಳ ಮೇಲಿನ ಬಡ್ಡಿ ದರ' ಮತ್ತು 'ದೊಡ್ಡ ಸಾಲಗಳ ಮೇಲಿನ ಮಾಹಿತಿಗೆ ಸಂಬಂಧಿಸಿದ ಕೆಲವು ನಿರ್ದೇಶನಗಳನ್ನು ಅನುಸರಿಸದೇ ಇರುವುದರಿಂದ, ತಮಿಳುನಾಡು ಮರ್ಕೆಂಟೈಲ್ ಬ್ಯಾಂಕ್ ಲಿಮಿಟೆಡ್‌ಗೆ ಒಂದು ಕೋಟಿ ಮೂವತ್ತೊಂದು ಲಕ್ಷದ ಎಂಭತ್ತು ಸಾವಿರ ರೂಪಾಯಿಗಳ ದಂಡ ವಿಧಿಸಲಾಗಿದೆ. ಎರಡನೇ ಪ್ರಕರಣದಲ್ಲಿ, ಡಿಸಿಬಿ ಬ್ಯಾಂಕ್ ಲಿಮಿಟೆಡ್‌ಗೆ ೬೩ ಲಕ್ಷದ ಅರವತ್ತು ಸಾವಿರ ರೂಪಾಯಿ ದಂಡ ವಿಧಿಸಲಾಗಿದೆ.

ಬ್ಯಾಂಕಿನ ಶಾಸನಬದ್ಧ ತಪಾಸಣೆಯ ಪ್ರಕಾರ; ಕೆಲವು ಎಂ.ಸಿ.ಎಲ್.ಆರ್ ಲಿಂಕ್ಡ್ ಫ್ಲೋಟಿಂಗ್ ರೇಟ್ ಮುಂಗಡಗಳಲ್ಲಿ ನಿಗದಿತ ಅವಧಿಗೆ ಬಡ್ಡಿದರಗಳನ್ನು ಮರುಹೊಂದಿಸಲು ಬ್ಯಾಂಕ್ ವಿಫಲವಾಗಿದೆ ಎಂದು ಆರ್.ಬಿ.ಐ ಹೇಳಿದೆ.

<><*<><>*><>

ಪಶ್ಚಿಮ ಬಂಗಾಳದಲ್ಲಿ ೨೦೨೩ರ ಮಾರ್ಚ್‌ನಲ್ಲಿ ರಾಮನವಮಿ ಆಚರಣೆಯ ಸಂದರ್ಭದಲ್ಲಿ ನಡೆದ ಕೋಮು ಹಿಂಸಾಚಾರದ ಪ್ರಕರಣಕ್ಕೆ ಸಂಬಂಧಿಸಿ, ರಾಷ್ಟ್ರೀಯ ತನಿಖಾ ಸಂಸ್ಥೆ ಇನ್ನೂ ೧೧ ಆರೋಪಿಗಳನ್ನು ಬಂಧಿಸಿದೆ. ಆರೋಪಿಗಳನ್ನು ಶಮೀಮ್ ಅಹ್ಮದ್, ಬಲ್ವಂತ್ ಸಿಂಗ್, ಮೆಹಮೂದ್ ಆಲಂ, ಮೆಹಫೂಜ್ ಆಲಂ, ಶಂಶಾದ್ ಆಲಂ, ಮೊಹಮ್ಮದ್ ಅಲಿ, ಸಲೀಂ ಜಾವೇದ್, ಸರ್ಫರಾಜ್ ಆಲಂ, ಫಿರೋಜ್ ಖಾನ್, ಎಂಡಿ ಸಮೀರ್ ಅನ್ಸಾರಿ ಮತ್ತು ಶಂಶಾದ್ ಹುಸೇನ್ ಎಂದು ಗುರುತಿಸಲಾಗಿದೆ. ಇವರೆಲ್ಲರೂ ಪಶ್ಚಿಮ ಬಂಗಾಳದ ಹೌರಾದ ಶಿಬ್‌ಪುರ ನಿವಾಸಿಗಳು. ಹೌರಾದ ಶಿಬ್‌ಪುರದಲ್ಲಿ ನಡೆದ ದಾಳಿಯಿಂದ ಉಂಟಾದ ಕೋಮುಗಲಭೆಯ ಹಿನ್ನೆಲೆಯಲ್ಲಿ ೩೬ ಆರೋಪಿಗಳ ವಿರುದ್ಧ ರಾಜ್ಯ ಪೊಲೀಸರು ಆರಂಭದಲ್ಲಿ ಪ್ರಕರಣ ದಾಖಲಿಸಿದ್ದರು. ರಾಮನವಮಿ ಆಚರಣೆ ವೇಳೆ ನಡೆದ ಕೋಮುಗಲಭೆಗೆ ಸಂಬಂಧಿಸಿದ ಎಲ್ಲಾ ಪ್ರಕರಣಗಳನ್ನು ಎನ್‌ಐಎಗೆ ವರ್ಗಾಯಿಸುವಂತೆ ಕಲ್ಕತ್ತಾದ ಹೈಕೋರ್ಟ್ ಕಳೆದ ವರ್ಷ ಏಪ್ರಿಲ್‌ನಲ್ಲಿ ಆದೇಶ ನೀಡಿತ್ತು.

<><*<><>*><>

ಪಾಕಿಸ್ತಾನದ ಮಾಜಿ ಪ್ರಧಾನಿ ಮತ್ತು ಪಾಕಿಸ್ತಾನ್ ತೆಹ್ರೀಕ್-ಇ-ಇನ್ಸಾಫ್ ಪಾರ್ಟಿ ಸಂಸ್ಥಾಪಕ ಇಮ್ರಾನ್‌ಖಾನ್ ಅವರನ್ನು ನಿನ್ನೆ ಇಸ್ಲಾಮಾಬಾದ್‌ನ ಜುಡಿಷಿಯಲ್ ನ್ಯಾಯಾಧೀಶರು ರಾಜಧಾನಿಯಲ್ಲಿ ಬೆಂಕಿ ಹಚ್ಚುವಿಕೆ ಮತ್ತು ವಿಧ್ವಂಸಕ ಆರೋಪಗಳಲ್ಲಿ ದೋಷಮುಕ್ತಗೊಳಿಸಿದ್ದಾರೆ. ಸ್ಥಳೀಯ ಮಾಧ್ಯಮ ವರದಿಗಳ ಪ್ರಕಾರ, ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಎರಡು ವರ್ಷಗಳ ಹಿಂದೆ ಇಮ್ರಾನ್‌ಖಾನ್ ವಿರುದ್ಧ, ಇಸ್ಲಾಮಾಬಾದ್‌ನ ಲೋಹಿ ಭೈರ್ ಮತ್ತು ಸಹಲಾ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಪ್ರಕರಣಗಳಲ್ಲಿ ಅವರನ್ನು ಖುಲಾಸೆಗೊಳಿಸಿತು.

<><*<><>*><>

ಸ್ವಿಸ್ ಓಪನ್ ಬ್ಯಾಡ್ಮಿಂಟನ್ ನಲ್ಲಿ ಭಾರತದ ಗಾಯತ್ರಿ ಗೋಪಿಚಂದ್ ಮತ್ತು ಟ್ರೀಸಾ ಜಾಲಿ ಮಹಿಳೆಯರ ಡಬಲ್ಸ್ ವಿಭಾಗದ ಪ್ರೀ ಕ್ವಾರ್ಟರ್‌ಗೆ ಪ್ರವೇಶಿಸಿದ್ದಾರೆ. ಸ್ವಿಟ್ಜರ್ಲೆಂಡ್‌ನ ಬಾಸೆಲ್‌ನಲ್ಲಿರುವ ಸೇಂಟ್ ಜಾಕೋಬ್‌ಶಾಲೆ ಅರೇನಾದಲ್ಲಿ ನಿನ್ನೆ ಅವರು ೩೨ ರ ಸುತ್ತಿನಲ್ಲಿ ಅಮೆರಿಕದ ಕೆರ್ರಿ ಕ್ಸು ಮತ್ತು ಅನ್ನಿ ಕ್ಸು ಜೋಡಿಯನ್ನು ೨೧-೧೫, ೨೧-೧೨  ಅಂತರದಲ್ಲಿ ಸೋಲಿಸಿದರು. ಪುರುಷರ ಡಬಲ್ಸ್‌ನಲ್ಲಿ ಭಾರತದ ಹರಿಹರನ್ ಅಂಶಕರುಣನ್ ಮತ್ತು ರುಬನ್ ಕುಮಾರ್ ರೆತಿನಸಬಾಪತಿ ಜೋಡಿ, ಅರ್ಹತಾ ಸುತ್ತಿನಲ್ಲಿ ಫ್ರೆಂಚ್ ಜೋಡಿ ನಟನ್ ಬೆಗ್ಗಾ ಮತ್ತು ಬ್ಯಾಪ್ಟಿಸ್ಟ್ ಲ್ಯಾಬರ್ತೆ ಅವರನ್ನು ೨೧-೧೭, ೨೧-೧೫ ಅಂತರದಲ್ಲಿ ಮಣಿಸಿದರು. ಮಿಶ್ರ ಡಬಲ್ಸ್‌ನಲ್ಲಿ ಎನ್. ಸಿಕ್ಕಿ ರೆಡ್ಡಿ ಮತ್ತು ಬಿ. ಸುಮೀತ್ ರೆಡ್ಡಿ ಅವರು ಅರ್ಹತಾ ಸುತ್ತಿನಲ್ಲಿ ಬ್ರೆಜಿಲ್‌ನ ಸಮಿಯಾ ಲಿಮಾ ಮತ್ತು ಡೇವಿ ಸಿಲ್ವಾ ಅವರನ್ನು ೨೧-೧೨, ೨೧-೧೭ ರಿಂದ ಪರಾಭವಗೊಳಿಸಿದರು.

ಇದಕ್ಕೂ ಮುನ್ನ ನಡೆದ ಪುರುಷರ ಸಿಂಗಲ್ಸ್ ಅರ್ಹತಾ ಸುತ್ತಿನ ಪಂದ್ಯದಲ್ಲಿ ಸತೀಶ್ ಕುಮಾರ್ ಕರುಣಾಕರನ್, ೨೧-೧೮, ೨೧-೧೨ ಅಂತರದಲ್ಲಿ ಎಲ್ ಸಾಲ್ವಡಾರ್‌ನ ಯುರಿಯಲ್ ಕಂಜುರಾ ಅವರನ್ನು ಸೋಲಿಸಿದರೆ, ಸಮೀರ್ ವರ್ಮಾ, ಬ್ರೆಜಿಲ್‌ನ ಕೊಯೆಲೊ ಡಿ ಒಲಿವೇರಾ ಅವರನ್ನು ೨೧-೧೧, ೨೧-೧೦, ೨೧-೧೪ರಲ್ಲಿ ಮಣಿಸಿದರು.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಅಪರಾಹ್ನ ೧.೧೦ ಕ್ಕೆ <>*><>**